ಸಂದರ್ಭದಲ್ಲಿ, ಜೈನಧರ್ಮದ ಕುರಿತ ಪಟ್ಟನಾಯಕರ ಕೃತಿ, ಧರ್ಮಕ್ಕೆ ಸಂಬಂಧಿಸಿದ ಕೃತಿಯನ್ನೂ ಎಷ್ಟರ ಮಟ್ಟಿಗೆ ಸೃಜನಶೀಲಗೊಳಿಸಬಹುದು ಎನ್ನುವುದಕ್ಕೆ ಉದಾಹರಣೆಯಂತಿದೆ.

ಜೈನಧರ್ಮಕ್ಕೂ ಕನ್ನಡ ಪರಂಪರೆಗೂ ಹೊಕ್ಕುಳು ಬಳ್ಳಿ ಸಂಬಂಧ. ಕನ್ನಡ ಸಾಹಿತ್ಯದ ಬಹುತೇಕ ತಾಯಿಬೇರುಗಳು ಜೈನಧರ್ಮದೊಂದಿಗೆ ತಳಕು ಹಾಕಿಕೊಂಡಿರುವುದನ್ನು ಗಮನಿಸಿದರೆ, ಕನ್ನಡ ವಿವೇಕ ಪರಂಪರೆ ಹಾಗೂ ಜೈನಧರ್ಮದ ನಡುವಿನ ಗೆರೆಯೇ ಅಳಿಸಿಹೋಗುತ್ತದೆ. ಕೃತಿಯ ಆರಂಭದಲ್ಲಿ ಅನುವಾದಕರು ಬರೆದಿರುವ ಪ್ರಸ್ತಾವನೆಯಲ್ಲಿಯೂ, ಜೈನ ಧರ್ಮಕ್ಕೂ ಕನ್ನಡ ಸಾಹಿತ್ಯದ ಮನೋಧರ್ಮಕ್ಕೂ ಇರುವ ಸಂಬಂಧದ ಸೂಚನೆಯಿದೆ.




ಇತಿಹಾಸ, ವಿಚಾರ, ಸಂಪ್ರದಾಯ, ವಾಸ್ತುಶಿಲ್ಪ, ಕಲೆ – ಹೀಗೆ ಹಲವು ರೂಪಗಳಲ್ಲಿ ಜೈನಧರ್ಮದ ಅನನ್ಯತೆಯನ್ನು ಅರ್ಥೈಸುವ, ಅರ್ಥ ಮಾಡಿಸುವ ಪ್ರಯತ್ನ ಪಟ್ಟನಾಯಕರ ಕೃತಿಯಲ್ಲಿದೆ. ಪುಸ್ತಕದ ಕೆಲವು ಭಾಗಗಳು ಸಂವಾದಕ್ಕೆ ಆಸ್ಪದ ಕಲ್ಪಿಸುವಂತಿವೆ. ಉದಾಹರಣೆಗೆ, 'ಧರ್ಮ' ಎನ್ನುವ ಭಾಗವನ್ನು ಗಮನಿಸಿ. 'ಬಹುಪಾಲು ಹಿಂದೂ ಧರ್ಮೀಯರು ಜೈನ ಮತ್ತು ಬೌದ್ಧ ಧರ್ಮಗಳು ಸ್ವತಂತ್ರ ಧರ್ಮಗಳು ಎಂದು ಭಾವಿಸದೆ, ಹಿಂದೂ ಧರ್ಮಕ್ಕೆ 'ಪ್ರತಿಕ್ರಿಯೆ'ಗಳು ಎನ್ನುವ ಅರ್ಥದಲ್ಲಿ ಭಾವಿಸುತ್ತಾರೆ. ಆದರೆ, ವಾಸ್ತವದಲ್ಲಿ ಹಿಂದೂ ಧರ್ಮವೇ ಜೈನ ಹಾಗೂ ಬೌದ್ಧ ಧರ್ಮಗಳಿಗೆ ಪ್ರತಿಕ್ರಿಯಾತ್ಮಕವಾಗಿದೆ' ಎನ್ನುವ ಮಾತು ಕೃತಿಯ ಚೌಕಟ್ಟಿನಾಚೆಗೆ ಸಂವಾದವನ್ನು ಬಯಸುವಂತಹದ್ದು. ಆದರೆ, ಇಂಥ ಸಾಧ್ಯತೆಗಳನ್ನು ಪಟ್ಟನಾಯಕರು ವಿಸ್ತರಿಸಲು ಹೋಗುವುದಿಲ್ಲ. ವಿಚಾರವೊಂದನ್ನು ಬೀಜರೂಪದಲ್ಲಷ್ಟೇ ಮಂಡಿಸುವ ಅವರ ಬರವಣಿಗೆ, ತಮ್ಮ ಚಿಂತನೆಗಳನ್ನು ಜಿಜ್ಞಾಸೆಯ ಮಟ್ಟಕ್ಕೆ ಏರಿಸಲು ಪ್ರಯತ್ನಿಸುವುದಿಲ್ಲ. ಬಹುಶಃ, ದೊಡ್ಡ ಓದುಗವರ್ಗವನ್ನು ಗಮನದಲ್ಲಿರಿಸಿಕೊಂಡ ಬರವಣಿಗೆಯಲ್ಲಿ ಇಂಥ ಜಿಜ್ಞಾಸೆಗೆ ಅವಕಾಶ ಕಡಿಮೆ ಇರಬಹುದು.

ಪುಟ್ಟ ಪುಟ್ಟ ಕಥನಗಳ ಮೂಲಕ ಧಾರ್ಮಿಕ ಸಂಗತಿಗಳನ್ನೂ ರಸಭರಿತ ಓದಾಗಿ ಬದಲಿಸುವ ಕಲೆಗಾರಿಕೆ ಇಲ್ಲಿನ ಬರವಣಿಗೆಯಲ್ಲಿದೆ. ನಿರ್ದಿಷ್ಟ ಧರ್ಮವೊಂದರ ಕುರಿತ ಈ ಕೃತಿಯನ್ನು ಇತರ ಧರ್ಮೀಯರೂ ಆಸಕ್ತಿಯಿಂದ ಓದಬಹುದಾಗಿದೆ. ಪುಸ್ತಕದ ಕೊನೆಯಲ್ಲಿ ನೀಡಲಾಗಿರುವ 'ಶಾಂತಿಮಂತ್ರ'ದಲ್ಲಿರುವ ಲೋಕಕಲ್ಯಾಣದ ಆಶಯದ ಅನುಭವವನ್ನು ಪುಸ್ತಕದ ಓದು ನೀಡುವಂತಿದೆ.

ಪಟ್ಟನಾಯಕರ ಎರಡೂ ಕೃತಿಗಳ ಚೆಲುವನ್ನು ಲೇಖಕರೇ ಬಿಡಿಸಿರುವ ರೇಖಾಚಿತ್ರಗಳು ಹೆಚ್ಚಿಸಿವೆ. ಹಾಗೆಯೇ ಅನುವಾದದ ಸರಳ ಸೌಂದರ್ಯ ಹಾಗೂ ಮುದ್ರಣದ ಸೊಗಸು ಕೂಡ ಪುಸ್ತಕಗಳ ಮೌಲ್ಯಕ್ಕೆ ತಕ್ಕಂತಿದೆ.

●

**ಜೈನಧರ್ಮ: 63 ಒಳನೋಟಗಳು**
ಲೇ: ದೇವದತ್ತ ಪಟ್ಟನಾಯಕ;
ಕನ್ನಡಕ್ಕೆ: ಪದ್ಮರಾಜ ದಂಡಾವತಿ;
ಪು: 316; ಬೆ: ರೂ. 375

**ರಾಮಾಯಣ ಮಹಾಭಾರತ ಮುಖಾಮುಖಿ**
ಲೇ: ದೇವದತ್ತ ಪಟ್ಟನಾಯಕ;
ಕನ್ನಡಕ್ಕೆ: ಪದ್ಮರಾಜ ದಂಡಾವತಿ;
ಪು: 256; ಬೆ: ರೂ. 325

ಎರಡೂ ಪುಸ್ತಕಗಳ ಪ್ರಕಟಣೆ: ಅರವಿಂದ್ ಇಂಡಿಯಾ,
#645/ಎ, 6ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು– 560040.